# ಕರ್ನಾಟಕ ಸರ್ಕಾರ
## ಕಾಲೇಜು ಶಿಕ್ಷಣ ಇಲಾಖೆ
## ಸರಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ, ಜಮಖಂಡಿ
(ನ್ಯಾಕನಿಂದ "ಬಿ"ಗ್ರೇಡ್ ಮಾನ್ಯತೆ ಪಡೆದಿದೆ)

## 2017–18ನೇ ಸಾಲಿನ ಕ್ರೀಡಾ ವರದಿ

ನಮ್ಮ ಮಹಾವಿದ್ಯಾಲಯದ 2017–18ನೇ ಶೈಕ್ಷಣಿಕ ಸಾಲಿನ ತರಗತಿಗಳು ದಿನಾಂಕ;1–06–2017 ರಿಂದ ಪ್ರಾರಂಭಗೊಂಡಿವೆ. ದಿನಾಂಕ: 29–08–2017 ರಂದು ನಮ್ಮ ಮಹಾವಿದ್ಯಾಲಯದ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಆಚರಿಸಲಾಯಿತು. ಪ್ರಥಮ ವರ್ಷದ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಸ್ವಾಗತ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಅಕ್ಕಮಹಾದೇವಿ ವಿಶ್ವವಿದ್ಯಾಲಯದ ಅಂತರ್ ಕಾಲೇಜಿನ ಕಬ್ಬಡ್ಡಿ ಪಂದ್ಯಾವಳಿಗಳು ದಿ:31–08–2017 ರಂದು ರಾಣಿಬೆನ್ನೂರಿನ ಎಸ್ ಜೆ ಎಂ ವಿ ಮಹಾವಿದ್ಯಾಲಯದಲ್ಲಿ ಜರುಗಿದ್ದು ಆ ಪಂದ್ಯದಲ್ಲಿ ನಮ್ಮ ಮಹಾವಿದ್ಯಾಲಯ ದ್ವತೀಯ ಸ್ಥಾನ ಪಡೆದಿದ್ದು ವಿಶ್ವವಿದ್ಯಾಲಯ ತಂಡಕ್ಕೆ ಕು.ರೇಷ್ಮಾ ರಾಠೋಡ, ವಾಣಿಶ್ರೀ ನ್ಯಾಮಗೌಡ ಹಾಗೂ ~~ಜ್ಯೋತಿ~~ ಜಂಗ್ಲಿ ಶ್ರೀ ಭಜಂತ್ರಿಯವರು ಆಯ್ಕೆಯಾಗಿರುವರು.

ದಿನಾಂಕ:07–09–2017 ರಂದು ಕ್ರೀಡಾ,ಸಾಸ್ಕೃತಿಕ ಹಾಗೂ ಎನ್‌ಎಸ್‌ಎಸ್, ರೆಡ್ ಕ್ರಾಸ್ ಘಟಕಗಳ ಉದ್ಘಾಟನಾ ಸಮಾರಂಭವು ಜರುಗಿದ್ದು, ಅಂದು ಉದ್ಘಾಟಕರಾಗಿ ಬಾಗಲಕೋಟ ಜಿಲ್ಲಾ ಪಂಚಾಯತ ಅಧ್ಯಕ್ಷರಾದ ಶ್ರೀಮತಿ ವೀಣಾ ಕಾಶಪ್ಪನವರ ಹಾಗೂ ಸ್ಥಳೀಯ ಶಾಸಕರು ಉಪಸ್ಥಿತರಿದ್ದರು.

ದಿನಾಂಕ: 08,09 ಸೆಪ್ಟೆಂಬರ್ 2017 ರಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಚದುರಂಗಸ್ಪರ್ಧೆಯು ಎಸ್.ಜಿ.ಎಮ್.ವ್ಹಿ. ಮಹಾವಿದ್ಯಾಲಯ, ಹುಬ್ಬಳ್ಳಿಯಲ್ಲಿ ಜರುಗಿದ್ದು, ಅದರಲ್ಲಿ ನಮ್ಮ ಮಹಾವಿದ್ಯಾಲಯದ ತಂಡವು. ಭಾಗವಹಿಸಿತ್ತು.

ದಿನಾಂಕ: 11,12 ಸೆಪ್ಟೆಂಬರ್ 2017ರಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಖೋ–ಖೋ ಸ್ಪರ್ಧೆಯು ಸರಕಾರಿ ಪ್ರಥಮ ದರ್ಜೆ ಮಹಿಳಾ ಮಾಹಾವಿದ್ಯಾಲಯ, ಬೈಲಹೊಂಗಲ್‌ನಲ್ಲಿ ಜರುಗಿದ್ದು, ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ಭಾಗವಹಿಸಿದ್ದರು ಅದರಲ್ಲಿ ಬಿ.ಎ. ದ್ವಿತೀಯ ವರ್ಷದ ವಿದ್ಯಾರ್ಥಿನಿಯಾದ ಕುಮಾರಿ. ಚಂದ್ರಕಲಾ ಬಾಡಗಂಡಿ ಹಾಗೂ ಕುಮಾರಿ. ವಿದ್ಯಾಶ್ರೀ ಸದಪ್ಪಗೋಳ ಇವರು ವಿಶ್ವವಿದ್ಯಾಲಯದ ತಂಡಕ್ಕೆ ಆಯ್ಕೆಯಾಗಿ ಅಂತರ್ ವಿಶ್ವವಿದ್ಯಾಲಯ ಸ್ಪರ್ಧೆಯು ಆದರಲ್ಲಿ ಭಾಗವಹಿಸಿದ್ದರು.

ದಿನಾಂಕ: 16–09–2017 ಅಕ್ಕಮಹಾದೇವಿ ವಿಶ್ವವಿದ್ಯಾಲಯದ ಹ್ಯಾಂಡ್ ಬಾಲ್ ಪಂದ್ಯಾವಳಿ ಹಾಗೂ ಆಯ್ಕೆಯು ಸರ್ಕಾರಿ ಮಹಿಳಾ ಮಹಾವಿದ್ಯಾಲಯ ಧಾರವಾಡದಲ್ಲಿ ಜರುಗಿದ್ದು, ನಮ್ಮ ಮಹಾವಿದ್ಯಾಲಯದ ಕು. ರತ್ನಾ ಯಂಗಿ ವಿಶ್ವವಿದ್ಯಾಲಯ ತಂಡಕ್ಕೆ ಆಯ್ಕೆಯಾಗಿದ್ದರು.

ದಿನಾಂಕ:25,26 ಸೆಪ್ಟೆಂಬರ 2017ರಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಅಥ್ಲೇಟಿಕ್ ಸ್ಪರ್ಧೆಯು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರದಲ್ಲಿ ಜರುಗಿದ್ದು, ಅದರಲ್ಲಿ ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಸದರಿ ಸ್ಪರ್ಧೆಯಲ್ಲಿ ಈ ಕೆಳಕಂಡ ವಿದ್ಯಾರ್ಥಿನಿಯರು ವಿವಿಧ ಸ್ಥಾನಗಳನ್ನು ಪಡೆದರು:

Scanned by CamScanner

| ಕ್ರ.ಸಂ. | ವಿದ್ಯಾರ್ಥಿನಿಯರ ಹೆಸರು | ಸ್ಪರ್ಧೆ | ಸ್ಥಾನ |
|---|---|---|---|
| 01 | ಕು. ರೇಷ್ಮಾ ರಾಠೋಡ | ಎತ್ತರ ಜಿಗಿತ | ದ್ವಿತೀಯ |
| 02 | ಕು. ವಾಣಿಶ್ರೀ ಹುಗಾರ | 100ಮೀ. ಅಡತಡೆ ಓಟ | ಚತುರ್ಥ |
| 03 | ಕು. ಸರಸ್ವತಿ ಗತ್ತಾರಿ | 400ಮೀ. ಅಡತಡೆ ಓಟ | ಚತುರ್ಥ |
| 04 | ಕು. ಆರತಿ ಅಂಬಿ | 400ಮೀ ಓಟ | ತೃತೀಯ |

ಕು. ರೇಶ್ಮಾ ರಾಠೋಡ, ಕು. ಸರಸ್ವತಿ ಗತ್ತಾರಿ, ಕು. ಆರತಿ ಅಂಬಿ, ಕು. ವಿಜಯಾ ಆಸಂಗಿ ಇವರು 4*100 ಮೀ ಓಟದಲ್ಲಿ ತೃತೀಯ ಸ್ಥಾನ ಪಡೆದಿರುವರು.

ದಿನಾಂಕ: 13, 14 ಆಕ್ಟೋಬರ್ 2017 ರಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪವರ್ ಲಿಪ್ಟಿಂಗ್ ಹಾಗೂ ವೇಟ್ ಲಿಪ್ಟಿಂಗ್ ಸ್ಪರ್ಧೆಯು ನಮ್ಮ ಮಹಾವಿದ್ಯಾಲಯ, ಹಮ್ಮಿಕೊಂಡಿದ್ದು , ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ಕು. ರಂಜಿತಾ ಗಂಗನಳ್ಳಿ, ಬಾಳವ್ವ ಎಮ್ಮಿ, ರೇಷ್ಮಾ ರಾಠೋಡ ಭಾಗವಹಿಸಿದ್ದರು ಅದರಲಿ ನಮ್ಮ ವಿದ್ಯಾರ್ಥಿನಿಯರು ವಿಶ್ವವಿದ್ಯಾಲಯದ ತಂಡಕ್ಕೆ ಆಯ್ಕೆಯಾಗಿ ಅಂತರ್ ವಿಶ್ವವಿದ್ಯಾಲಯ ಸ್ಪರ್ಧೆಯು ಪಂಜಾಬ ವಿಶ್ವವಿದ್ಯಾಲಯ, ಚಂಡಿಗಢದಲ್ಲಿ ಜರುಗಿದ್ದು ಆದರಲ್ಲಿ ಭಾಗವಹಿಸಿದ್ದರು.

ದಿನಾಂಕ: 13 ಅಕ್ಟೋಬರ್ 2017ರಂದು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಜ್ಯೂಡೋ ಸ್ಪರ್ಧೆಯು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರದಲ್ಲಿ ಜರುಗಿದ್ದು, ಅದರಲ್ಲಿ ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿನಿ ಕುಮಾರಿ. ಕವಿತಾ ಪುಜಾರಿ ಹಾಗೂ ಪವಿತ್ರಾ ಒಡೆಯರ ಇವರು ವಿಶ್ವವಿದ್ಯಾಲಯದ ತಂಡಕ್ಕೆ ಆಯ್ಕೆಯಾಗಿ ಜರುಗಿದ ಅಂತರ್ ವಿಶ್ವವಿದ್ಯಾಲಯ ಸ್ಪರ್ಧೆಯ್ಲಲ್ಲಿ ಭಾಗವಹಿಸಿದ್ದರು.

ದಿನಾಂಕ: 16 ಅಕ್ಟೋಬರ್ 2017ರಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಸ್ತಿ ಸ್ಪರ್ಧೆಯು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರದಲ್ಲಿ ಜರುಗಿದ್ದು, ಅದರಲ್ಲಿ ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ಕುಮಾರಿ. ಕವಿತಾ ಪುಜಾರಿ ಹಾಗೂ ಬಾಳವ್ವ ಜಕನೂರ ಇವರು ವಿಶ್ವವಿದ್ಯಾಲಯದ ತಂಡಕ್ಕೆ ಆಯ್ಕೆಯಾಗಿ ಅಂತರ್ ವಿಶ್ವವಿದ್ಯಾಲಯ ಜರುಗಿದ್ದು ಆದರಲ್ಲಿ ಭಾಗವಹಿಸಿದ್ದರು. ದಿನಾಂಕ: 09-10-2017 ರಂದು ಅಕ್ಕಮಹಾದೇವಿ ವಿಶ್ವವಿದ್ಯಾಲಯದ ತ್ರೋಬಾಲ್ ಪಂದ್ಯಾವಳಿಯು ಧಾರವಾಡದಲ್ಲಿ ಜರುಗಿದ್ದು ಆ ಪಂದ್ಯಾವಳಿಯಲ್ಲಿ ಮಹಾವಿದ್ಯಾಲಯದ ಕು. ಕಾವೇರಿ ಕಾಂಬಳೆ ಹಾಗೂ ಭಾಗೆಶ್ರೀ ಗುಡೆನ್ನವರ ಭಾಗವಹಿಸಿದ್ದರು.

ದಿನಾಂಕ:21,22 ಮಾರ್ಚ್ 2018ರಂದು ಮಹಾವಿದ್ಯಾಲಯದ ವಾರ್ಷಿಕ ಕ್ರೀಡಾಕೂಟವನ್ನು ಹಮ್ಮಿಕೊಂಡಿದ್ದು 100 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಈ ಪಂದ್ಯಾವಾಳಿಯನ್ನು ಯಶಸ್ವಿಗೂಳಿಸಲು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಪ್ರೊ. ಎಮ್. ಡಿ. ನೇವಣಿ ಹಾಗೂ ಮಹಾವಿದ್ಯಾಲಯದ ಸಮಸ್ತ ಬೋಧಕ-ಬೋಧಕೇತರ ಸಿಬ್ಬಂದಿಯವರು ಸಹಕರಿಸಿದರು. ಹಾಗೂ ಶ್ರೀ ಕಾಶಿನಾಥ ಶಿಂಧೆ ಇವರು ಸಹ ಸಹಕಾರ ನೀಡಿರುತ್ತಾರೆ. ಕಾರಣ ಕ್ರೀಡಾ ವಿಭಾಗಕ್ಕೆ ಸಹಕರಿಸಿದ ಎಲ್ಲರಿಗೂ ಈ ಮೂಲಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಪ್ರಾಚಾರ್ಯರು
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು
ಜಮಖಂಡಿ. ಜಿ. ಬಾಗಲಕೋಟ

Scanned by CamScanner